ಒಂದಾ ಮಾಡಲು ಎದ್ದಿದ್ದಾಳೆ. ಪಡಸಾಲೆಯಲ್ಲಿ ಮಲಗುತ್ತಿದ್ದ ಬಸಣ್ಣ ಕಾಣಿಸದೇ ಹೊರಗೆ ಕಣ್ಣಾಡಿಸಿದಳು. ಹೊರಗೂ ಇರಲಿಲ್ಲ. ಕತ್ತಲು ಗವ್‌ಗುಡುತ್ತಿತ್ತು. ದಮ್ಮು ರೋಗಿಯ ಎದೆ ಬಡಿತ ಜೋರಾಗುತ್ತಿತ್ತು. ಅದೊ, ಅಲ್ಲಿ ನುಗ್ಗೆ ಮರ ಮುರಿದು ಬಿದ್ದು ಯಾರೋ ನರಳಾಡುತ್ತಿರುವ ಸದ್ದು. ನೋಡಿದರೆ ಬಸಣ್ಣ ಕುತ್ತಿಗೆಗೆ ಹಗ್ಗ ಬಿಗಿದುಕೊಂಡು ನೇಣು ಹಾಕಲು ಹೋದವ ನುಗ್ಗೆ ಮರದ ಟೊಂಗೆ ಮುರಿದು ಹಗ್ಗದ ಸಮೇತ ಕೆಳಗೆ ಬಿದ್ದು ಒದ್ದಾಡುತ್ತಿದ್ದ. ಬೆಚ್ಚಿದ ಜನಾಬಾಯಿ ಲಬೋ ಲಬೋ ಬಾಯಿ ಬಡಿದುಕೊಂಡಳು. ಅವಳ ಅಳುವಿನ ಸದ್ದು ಕೇಳಿದ ಜನತಾ ಪ್ಲಾಟಿನ ಬೀದಿಯ ಜನ ಓಡೋಡಿ ಬಂದು ಕತ್ತಿನ ಹಗ್ಗ ಬಿಚ್ಚಿ ಬಾಯಿಯಿಂದ ಬಾಯಿಗೆ ಉಸಿರು ಕೊಟ್ಟರೂ ಹೃದಯ ಬಡಿತ ನಾಡಿ ಇನ್ನೂ ಕ್ಷೀಣವಾಗಿದ್ದವು. ವಿಷಯ ಸಣ್ಣಪ್ಪ ಸಾವುಕಾರರ ತನಕ ಮುಟ್ಟಿ ಅವರೇ ಖುದ್ದು ತಮ್ಮ ಕಾರಿನಲ್ಲಿ ಅದೇ ಕ್ಷಣ ಮೀರಜ್‌ನ ಮಿಷನ್ ಆಸ್ಪತ್ರೆಗೆ ದಾಖಲಿಸಿ ಬಂದರು. ಬೆಳಗಾಗುವಷ್ಟರಲ್ಲಿ ಲಗಮಣ್ಣನೂ ಹುಬ್ಬಳ್ಳಿಯಿಂದ ನೇರವಾಗಿ ಮೀರಜ್‌ನ ಆಸ್ಪತ್ರೆಗೆ ಹೋದ. ಬಸಣ್ಣನ ಪರಿಸ್ಥಿತಿ ತೀರ ಗಂಭೀರವಾಗಿದ್ದರಿಂದ ಐ.ಸಿ.ಯೂನಲ್ಲಿ ಇಟ್ಟಿದ್ದರು. ಅಸಲು ಒಂದು ಲಕ್ಷ ರೂಪಾಯಿ ಡೆಪಾಜಿಟ್ ಇಟ್ಟುಕೊಂಡೇ ಈ ಅರೆ ಜೀವದ ಬಸಣ್ಣನನ್ನು ಆಸ್ಪತ್ರೆಯ ಐ.ಸಿ.ಯೂಗೆ ಶಿಫ್ಟ್ ಮಾಡಿದ್ರು. ಈಗ ಜನಾಬಾಯಿ ಮತ್ತು ಲಗಮಣ್ಣಾ ಬಸಣ್ಣನ ಆರೈಕೆಗೆ ನಿಂತರು. ಪ್ರತಿದಿನ ಏನಿಲ್ಲವೆಂದರೂ ಕನಿಷ್ಠ ಐದರಿಂದ ಹತ್ತು ಸಾವಿರ ರೂಪಾಯಿ ಮೆಡಿಸಿನ್ ಬೇಕಾಗುತ್ತಿತ್ತು. ಜನಾಬಾಯಿ ದೊಡ್ಡ ಡಾಕ್ಟರರ ಕೈ ಕಾಲು ಹಿಡಿದು, 'ಆಮೇಲೆ ಹಣ ಕೊಡ್ತೀವಿ ಜೀವ ಬದುಕಿಸಿ' ಎಂದು ದೈನೇಸಿಯಾಗಿ ಕೇಳಿಕೊಳ್ಳುತ್ತಿದ್ದರು. ಅಡ್ಮಿಟ್ ಮಾಡಿ ಹೋದ ಸಣ್ಣಪ್ಪಗೌಡರು ಚುನಾವಣಾ ಗಡಿಬಿಡಿಯಲ್ಲಿ ಮುಳುಗಿದ್ದರು. ಆಸ್ಪತ್ರೆಯತ್ತ ಬರುವುದು ಹಾಗಿರಲಿ, ಹೇಗಿದ್ದಾನೆಂದು ವಿಚಾರಿಸುವವರೂ ಯಾರೂ ಇರಲಿಲ್ಲ. ದಿನಗಳು ಕಳೆದವು. ಒಂದು ಮಧ್ಯ ರಾತ್ರಿ ಬಸಣ್ಣನ ಮುಖಕ್ಕೆ ಹಾಕಿದ ಮಾಸ್ಕು ಕಳಚಿದ ಡಾಕ್ಟರು ಬಸಣ್ಣನು ಮೃತಪಟ್ಟಿರುವುದನ್ನು ಖಾತ್ರಿ ಪಡಿಸಿ, ಮಿಕ್ಕ ಐವತ್ತಾರು ಸಾವಿರ ಬಿಲ್ಲು ಕಟ್ಟಿ ಶವ ಒಯ್ಯಲು ಸೂಚಿಸಿದರು. ಲಗಮಣ್ಣ ಜನಾಬಾಯಿ ದಿಕ್ಕು ತೋಚದೆ ರಾತ್ರೋರಾತ್ರಿ ಊರಿಗೆ ಬಂದಿದ್ದರು. ಎಷ್ಟು ಪ್ರಯತ್ನ ಪಟ್ಟರೂ ಒಂದು ರೂಪಾಯಿ ಹೊಂದಿಸಲಾಗದೆ ಅಸಹಾಯಕತೆಯಲ್ಲೇ ಅವ್ವ-ಮಗ ಬಾಗಿಲು ಮುಚ್ಚಿ ಅಳುತ್ತ ಕುಳಿತರು.

***

ವಿಷಯ ತಿಳಿದ ಸಣ್ಣಪ್ಪ ಗೌಡರು ಖುದ್ದು ತಾವೇ ಜನತಾಕಾಲೋನಿಗೆ ಬಂದು ತಾಯಿ ಮಗನನ್ನು ಸಮಾಧಾನ ಪಡಿಸಿದರು. ತಮ್ಮ ಹಟ್ಟಿಯ ತನಕ ಖುದ್ದು ಮಾತನಾಡಿಸಲು ಬಂದಿರುವರೆಂದು ತಿಳಿದ ಜನಾಬಾಯಿ, ಬಸಣ್ಣ ಸತ್ತ ಬೇಸರ ತುಸು ಮರೆತ ಹಾಗೆ ಆಯಿತು.

ತಂದೆ ತೀರಿ ಹೋದ ಕಾರಣ ಲಗಮಣ್ಣನ ಬಾಕಿ ಫೀಸನ್ನು ಇನ್ನು ಮೂರು ತಿಂಗಳೊಳಗೆ ಕಟ್ಟುವ ಗಡುವು ವಿಸ್ತರಿಸಿ ಕಾಲೇಜಿನ ಆಡಳಿತ ಮಂಡಳಿ ಪತ್ರ ಬರೆದು ತಿಳಿಸಿತ್ತು. ಸಣ್ಣಪ್ಪ ಗೌಡರು ಬಸಣ್ಣನ ಆತ್ಮಹತ್ಯೆಗೆ ಮೂರು ಲಕ್ಷ ಪರಿಹಾರ ಕೊಡಿಸುವ ಭರವಸೆ ನೀಡಿ ಹೋದಾಗ ತಾಯಿ ಮಗ ಇಬ್ಬರೂ ತುಸು ಗೆಲುವಾದರು. ಮಾರನೇ ದಿನವೇ ಲಗಮಣ್ಣ ಹುಬ್ಬಳ್ಳಿ ಮೆಡಿಕಲ್ ಕಾಲೇಜಿಗೆ ಹಾಜರಾದ.

ಅಷ್ಟೊತ್ತಿಗೆ ಅಡ್ಮಿಷನ್ ಪಡೆದ ಎಲ್ಲರೂ ತರಗತಿಗಳಿಗೆ ಹಾಜರಾಗುತ್ತಿದ್ದರು. ಆ ದಿನ ಮೊದಲನೇ ಕ್ಲಾಸು ಅನಾಟಾಮಿ. ಎರಡನೇ ಕ್ಲಾಸು ಫಿಜಿಯಾಲಾಜಿ, ಆದ ಮೇಲೆ ಊಟ. ಊಟದ ನಂತರ ಶವಚ್ಛೇದನ ತರಬೇತಿ. ಲಗಮಣ್ಣ ಬಡವನಾಗಿದ್ದರೂ ಶ್ರದ್ಧೆಯಿಂದ ಓದಿರುವುದಕ್ಕೆ ಇಲ್ಲಿ ಇಂತಹ ಪ್ರತಿಷ್ಠಿತ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದ. ಶವಚ್ಛೇದವೆಂದರೆ ಸತ್ತ ಮನುಷ್ಯನ ಅಂಗಗಳನ್ನು ಕುಯ್ದು ಅವನ ಪ್ರತೀ ಅಂಗವನ್ನು ಇಂಚಿಂಚೂ ಬಿಡದೆ ಅಧ್ಯಯನ ಮಾಡುವುದು.

ಟೇಬಲಿನ ಸುತ್ತ ಏಪ್ರನ್ ಹಾಕಿಕೊಂಡ ನಿಂತ ಹುಡುಗ ಹುಡುಗಿಯರು. ಮಧ್ಯ 'ಬಾಡಿ' ನಿಶ್ಚಿಂತ ಮಲಗಿದೆ. ಆಗಲೇ ತಡವಾಗಿದೆಯೆಂದು ಓಡೋಡುತ್ತಲೇ ಬಂದ ಲಗಮಣ್ಣ ಟೇಬಲ್ ಹತ್ತಿರ ನುಗ್ಗಿಬಂದ. ಟೇಬಲ್ ಮೇಲೆ ಶವವಾಗಿ ಬಿದ್ದ ಬಾಡಿ ನೋಡಿದ್ದೇ ಮೂರ್ಛೆ ಹೋಗಿ ಬಿದ್ದ. ವಾರದ ಹಿಂದಷ್ಟೇ ಮಿರಜ್‌ನ ಮಿಷನ್ ಆಸ್ಪತ್ರೆಯಲ್ಲಿ ಬಿಲ್ಲು ಕಟ್ಟಲಾಗದೆ ಬಿಟ್ಟು ಬಂದ ತನ್ನ ತಂದೆ ಬಸಣ್ಣನ ಶವವನ್ನೇ ಇಲ್ಲಿ ಇವನ ಅಧ್ಯಯನಕ್ಕಿಟ್ಟಿದ್ದರು.

●